**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿ.ಸಿ.ನಂಃ 857/2025**

**ಪಿರ್ಯಾದುದಾರರು :** ಸಹದೇವ. ಬಿನ್ ಲೇಟ್ ಚಿಕ್ಕಚಾಮುಂಡನಾಯ್ಕ , 52 ವರ್ಷ
ಕುಪ್ಪರವಳ್ಳಿ ಗ್ರಾಮ, ಬಿಳಿಗೆರೆ ಹೋಬಳಿ , ನಂಜನಗೂಡು ತಾ.

**ವಿರುದ್ಧ**

**ಆರೋಪಿ :** ಎಂ ಚಂದನ್ , ಬಿನ್ ಕೆ ಬಿ ಮಾಯಪ್ಪ , 26 ವರ್ಷ
ವಾಸಃ ಶ್ರೇಯಸ್ ಸರ್ವೀಸ್ ಸ್ಟೇಷನ್
ಬೃಂದಾನವ ಬಡಾವಣೆ ಎದುರು, ನಂಜನಗೂಡು ರಸ್ತೆ ,
ಟಿ.ನರಸೀಪುರ ಟೌನ್
ಕೇತಹಳ್ಳಿ ಗ್ರಾಮ, ಮೂಗುರು ಹೋಬಳಿ , ಟಿ.ನರಸೀಪುರ ತಾ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಆರೋಪಿಯ ಹೇಳಿಕೆ**

ಪ್ರಶ್ನೆ-1ಃ ಪಿರ್ಯಾದುದಾರರು ಈ ಪ್ರಕರಣದಲ್ಲಿ ತಮ್ಮ ಸ್ವಪ್ರಮಾಣೀಕೃತ ಹೇಳಿಕೆಯ ಭಾಗವಾಗಿ ಸಲ್ಲಿಸಿರುವ ಪ್ರಮಾಣಪತ್ರವನ್ನು ಓದಿ/ಸಿ ತಿಳಿದು ಕೊಂಡಿದ್ದೀರಾ ?

ಉತ್ತರಃ

ಪ್ರಶ್ನೆ-2ಃ ಪಿರ್ಯಾದುದಾರರಾದ ಸಹದೇವರವರು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ದೂರುದಾರರರಿಂದ ರೂ.3,71,300/-ಗಳ ಭತ್ತವನ್ನು ಖರೀದಿ ಮಾಡಿದ್ದು, ಸದರಿ ಮೊಬಲಗನ್ನು ಪಾವತಿ ಮಾಡಲು ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕೋಟಕ್ ಮಹೀಂದ್ರಾ ಬ್ಯಾಂಕ್, ಮುನಿಸಿಪಲ್ ರಸ್ತೆ, ಟಿ.ನರಸೀಪುರ ಶಾಖೆಗೆ ಸೇರಿದ ಚೆಕ್ ನಂ.000090 ಕ್ಕೆ ರೂ.3,71,300/- ಗಳನ್ನು ದಿನಾಂಕಃ 02.04.2025 ಎಂದು ನಮೂದಿಸಿ ಪಿರ್ಯಾದುದಾರರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ-3ಃ ಪಿರ್ಯಾದುದಾರರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ನೀಡಿದ್ದ ಚೆಕ್ಕನ್ನು ಆರೋಪಿಯಾದ ನಿಮ್ಮ ಉಳಿತಾಯ ಖಾತೆಯಿರುವ ಕೋಟಕ್ ಮಹೀಂದ್ರಾ

ಬ್ಯಾಂಕ್, ಮುನಿಸಿಪಲ್ ರಸ್ತೆ, ಟಿ.ನರಸೀಪುರ ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ ''ಸಾಕಷ್ಟು ಹಣವಿಲ್ಲ'' ಎಂಬ ಹಿಂಬರಹದೊಂದಿಗೆ ತಾವು ನೀಡಿದ ಚೆಕ್ಕು ದಿಃ03.04.2025 ರಂದು ಅಮಾನ್ಯಗೊಂಡಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರಃ

ಪ್ರಶ್ನೆ-4ಃ ಪಿರ್ಯಾದುದಾರರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ಚೆಕ್ಕು ನಗದಾಗದೆ ಹಿಂತಿರುಗಿ ಬಂದ ನಂತರ ಅವರಿ ವಕೀಲರ ಮುಲಕ ದಿಃ 17.04.2025 ರಂದು ನಿಮಗೆ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಜಾರಿಯಾದರು ಕೂಡ ತಾವು ಚೆಕ್ ನಲ್ಲಿ ನಮೂದಿಸಿರುವ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ. ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರ ಃ

ಪ್ರಶ್ನೆ-5 ಃ ನಿಮ್ಮ ಪರವಾಗಿ ಏನಾದರೂ ಸಾಕ್ಷಿ ವಿಚಾರಣೆ ಇದೆಯಾ ?

ಉತ್ತರಃ

ಪ್ರಶ್ನೆಃ 6 ಈ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೂ?
ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ದಿನಾಂಕ 06.08.2025 ರಂದು ಓದಿ ತಿಳಿಸಿ ಕೇಳಿದಾಗ ಆರೋಪಿ ಅವುಗಳನ್ನು ತಿಳಿದುಕೊಂಡು ಉತ್ತರಿಸಿದ್ದು, ಅಂತಹ ಉತ್ತರಗಳನ್ನು ಪ್ರತಿ ಪ್ರಶ್ನೆಗಳನ್ನು ಕನ್ನಡದಲ್ಲಿಯೇ ನಮೂದಿಸಿ ಈ ಮೂಲಕ ದೃಢೀಕರಿಸಿದೆ.)

1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು